ಈ ಅನಿಲವನ್ನು ಬಿಟ್ಟುಕೊಡಬೇಕಾದ ಪರಿಸ್ಥಿತಿ. ಬೆಂಕಿಯಿಂದ ಅಮೆಜಾನ್ ಮಳೆಕಾಡು ಸುಟ್ಟ ಜಾಗ ಭಾರತದ ವಿಸ್ತೀರ್ಣಕ್ಕೆ ಸಮ ಎಂದರೆ ಅದು ಕಳವಳಕ್ಕೆ ಈಡುಮಾಡದಿದ್ದೀತೆ? ಇನ್ನು ಈ ಕಾಡ್ಗಿಚ್ಚು ಹಲವು ದೇಶಗಳಿಗೂ ದುಷ್ಪರಿಣಾಮವನ್ನು ಬೀರಬಹುದು. ಆಸ್ಟ್ರೇಲಿಯಾದ ಕಾಡ್ಗಿಚ್ಚು 10,000 ಕಿಲೋ ಮೀಟರ್ ದೂರದಲ್ಲಿರುವ ನಮ್ಮ ಭಾರತದ ಹವಾಗುಣದ ಚಿತ್ರವನ್ನೇ ಬದಲಿಸಿದೆ. ಈ ವರ್ಷದ ಮಳೆಗಾಲಕ್ಕೇ ಸಂಚಕಾರ ತಂದಿದೆ ಎಂದು ಮೆಲ್ಬರ್ನ್ ವಿಶ್ವವಿದ್ಯಾನಿಲಯದ ಅಧ್ಯಯನವೊಂದು ಇತ್ತೀಚೆಗೆ ವರದಿಮಾಡಿದೆ.

## ಭೂಮಿಗೆ ಆಪತ್ತು

ಹದಿನೆಂಟನೇ ಶತಮಾನದವರೆಗೆ ಭೂಮಿಗೆ ಯಾವ ಬಾಧೆಯೂ ಇರಲಿಲ್ಲ. ನಂತರ ಬಂತು ಕೈಗಾರಿಕಾ ಕ್ರಾಂತಿ. ಮೊದಲು ಬ್ರಿಟನ್ನಿನಲ್ಲಿ ಇದು ಕಲ್ಲಿದ್ದಲ ಬಳಕೆಯಿಂದಲೇ ಪ್ರಾರಂಭವಾಯಿತು. ಮುಂದಿನ ಎಲ್ಲ ಕರಾಳ ಅಧ್ಯಾಯಕ್ಕೂ ಇದು ಮುನ್ನುಡಿ ಬರೆಯಿತು. ಕಲ್ಲಿದ್ದಲ ಸಂಪನ್ಮೂಲವಿರುವ ದೇಶಗಳು ಕಣ್ತೆರೆದವು. ಧಾರಾಳವಾಗಿ ಭೂಮಿಯಿಂದ ಬಗೆದವು. ರೈಲುಗಳಿಗೆ ಬಳಕೆಯಾಯಿತು. ಜೊತೆಜೊತೆಗೆ ಯಂತ್ರಾಭಿವೃದ್ಧಿಯಾಯಿತು. ಭೂಸಂಪನ್ಮೂಲಗಳ ಬಳಕೆ ಇಲ್ಲದೆ ಯಂತ್ರ ಹೇಗೆ ಬಂದೀತು? ಆದರೂ ಒಂದು ಮಟ್ಟದಲ್ಲಿ ಅದು ಕೂಡ ಸಹ್ಯ ಎನಿಸಿತು. ಆದರೆ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಕಲ್ಲಿದ್ದಲು ಬಳಕೆಗೆ ಬಂದಾಗ ಜಗತ್ತಿನ ಪರಿಸ್ಥಿತಿ ನಿಧಾನವಾಗಿ ಬದಲಾಯಿತು. ಸದ್ಯ 164 ದೇಶಗಳಲ್ಲಿ 30,000 ಉಷ್ಣ ವಿದ್ಯುತ್ ಸ್ಥಾವರಗಳು ಕ್ರಿಯಾಶೀಲವಾಗಿವೆ. 'ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್' ವರದಿ ಮಾಡಿರುವಂತೆ ಜಗತ್ತಿನ ಶೇ. 60 ಭಾಗ ಶಕ್ತಿಯ ಬೇಡಿಕೆಯನ್ನು ಉಷ್ಣ ವಿದ್ಯುತ್ ಸ್ಥಾವರಗಳು ಪೂರೈಸುತ್ತಿವೆ.

ಭಾರತದಲ್ಲೇ 110ಕ್ಕೂ ಮಿಕ್ಕಿ ಉಷ್ಣಸ್ಥಾವರಗಳಿವೆ. ಕರ್ನಾಟಕದ ರಾಯಚೂರು ಉಷ್ಣಸ್ಥಾವರಕ್ಕೆ ದಿನವೊಂದಕ್ಕೆ 20,000 ಮೆಟ್ರಿಕ್ ಟನ್ ಕಲ್ಲಿದ್ದಲು ಬೇಕು. ಮೊತ್ತದಲ್ಲಿ ಇವು ಹೇಳುವುದಿಷ್ಟು. ಕಲ್ಲಿದ್ದಲು ಉರಿಸಿದಷ್ಟೂ ವಾಯುಗೋಳಕ್ಕೆ ಕಾರ್ಬನ್ ಡೈ ಆಕ್ಸೈಡ್ ಜಮೆಯಾಗುತ್ತದೆ. ತೈಲ ತಂದ ಕ್ರಾಂತಿ ಇನ್ನೂ ದೊಡ್ಡದು. ತೈಲ ಪೂರೈಕೆ ನಿಂತಿತೆಂದರೆ ಇಡೀ ದೇಶ ದೇಶಗಳ ಚಲನಶಕ್ತಿಯೇ ನಿಂತಂತಾಗುತ್ತದೆ ಎನ್ನುವಷ್ಟು ಅವಲಂಬನೆಯಾಗಿದೆ. ಜಾಗತಿಕ ಮಟ್ಟದಲ್ಲಿ 990 ಲಕ್ಷ ಬ್ಯಾರೆಲ್ ತೈಲ ಉರಿಯುತ್ತದೆ. ಇದು ಕೂಡ ಉಷ್ಣಸ್ಥಾವರದಂತೆ ದೊಡ್ಡ ಪ್ರಮಾಣದಲ್ಲೇ ಮಾಲಿನ್ಯಕಾರಕವಾಗಿದೆ. ಜಗತ್ತಿನ ಅತ್ಯಂತ ಹೆಚ್ಚಿನ ಮಾಲಿನ್ಯದ ಮೂಲ ಸಿಮೆಂಟ್ ಉತ್ಪಾದನೆಯಲ್ಲಿ, ಅದು ಸುಣ್ಣಕಲ್ಲನ್ನು ಬಳಸುವುದರಿಂದ. ಜನಸಾಮಾನ್ಯರನ್ನೇ ಕೇಳಿ ನೋಡಿ. ವಿದ್ಯುತ್ ಬೇಡ, ವಾಹನ ಬೇಡ, ಸಿಮೆಂಟ್ ಬೇಡ ಎಂದು ಹೇಳಿದರೆ ಬದುಕು ಹೇಗೆ ಸಾಗುತ್ತದೆ ಎನ್ನುತ್ತಾರೆ.

ಇಷ್ಟಂತೂ ನಿಜ, ಈಗ ನಾವು ಹಿಮ್ಮುಖವಾಗಿ ಓಡಲು ಸಾಧ್ಯವಿಲ್ಲ. ಶಿಲಾಯುಗಕ್ಕೆ ಮರಳಲು ಯಾರು ಸಿದ್ಧ? ಆಧುನಿಕ ಜಗತ್ತಿನ ಎಲ್ಲ ಮೂಲಗಳಿಂದ ಎಲ್ಲ ದೇಶಗಳಿಂದ ವಾಯುಗೋಳಕ್ಕೆ ನಾವು ಜಮೆ ಮಾಡುತ್ತಿರುವುದು ಪ್ರತಿವರ್ಷ 35 ಶತಕೋಟಿ ಟನ್ನು. ಇದೆಲ್ಲ ಎಲ್ಲಿ ಹೋಗಬೇಕು? ನಾವು ಅದೇ ಗಾಳಿಯನ್ನು ಉಸಿರಾಡಬೇಕಲ್ಲ.

ಇನ್ನೊಂದು ವಿಸ್ಮಯವಿದೆ. ಶಾಲಾ ದಿನಗಳಲ್ಲೇ ನಮಗೆ ಕಲಿಸಿಕೊಟ್ಟ ಪಾಠವಿದೆ. ವಾಯುಗೋಳದಲ್ಲಿ ನೈಟ್ರೋಜನ್ ಅನಂತರ ಆಕ್ಸಿಜನ್ ಅಧಿಕ ಪ್ರಮಾಣದಲ್ಲಿದೆ. ಕಾರ್ಬನ್ ವಾಯುಗೋಳದಲ್ಲಿರುವುದು ತೀರ ಅಲ್ಪ. ಸಾಮಾನ್ಯವಾಗಿ ಹತ್ತು ಲಕ್ಷದಲ್ಲಿ ಇಷ್ಟು ಎಂದು ಗಣನೆ ಮಾಡುವುದುಂಟು.

ಕೈಗಾರಿಕಾ ಯುಗಕ್ಕೆ ಮೊದಲು ಗಾಳಿಯ ಹತ್ತುಲಕ್ಷ ಭಾಗದಲ್ಲಿ ಇದರ ಪಾಲು ಬರೀ 280. ಅದೇನೂ ಭೂಮಿಗೆ ಬಿಸಿ ಮುಟ್ಟಿಸಲಿಲ್ಲ. ಲೆಕ್ಕಕ್ಕೆ ಅಷ್ಟೇ. ಆದರೆ ಈಗ ಅದರ ಪ್ರಮಾಣ ಹತ್ತು ಲಕ್ಷದಲ್ಲಿ 445 ಭಾಗ. ಕಳೆದ 140 ಲಕ್ಷ ವರ್ಷಗಳಲ್ಲಿ ಈಗಲೇ ಅತ್ಯಧಿಕ ಮಟ್ಟದಲ್ಲಿರುವುದು. ವಾಯುಗೋಳದಲ್ಲಿ ಇದರಿಂದಾಗುತ್ತಿರುವ ಕೆಡುಕೇ ಹೆಚ್ಚು ಎನ್ನುತ್ತಾರೆ ಕೋಟಿ ಕೋಟಿ ವರ್ಷಗಳಲ್ಲಿ ಲೆಕ್ಕ ಕೊಡುವ ಭೂವಿಜ್ಞಾನಿಗಳು. ಇದಲ್ಲದೆ ಜೌಗಿನಿಂದ, ಭತ್ತದ ಗದ್ದೆಯಿಂದ, ಕಲ್ಲಿದ್ದಲ



ಕರಗುತ್ತಿದೆ ಅಂಟಾರ್ಟಿಕಾ ಹಿಮಹಾಸು...
ಅಂಟಾರ್ಟಿಕಾದ ಮಹಾ ಹಿಮಗಡ್ಡೆ ಕರಗಿ ಕುಸಿಯುತ್ತಿರುವ ದೃಶ್ಯ ಎಷ್ಟು ಮೋಹಕವಾಗಿ ಕಾಣುತ್ತದಲ್ಲವೇ? ಆದರೆ ಈ ದೃಶ್ಯದಲ್ಲಿ ಕೇಳಿಸುತ್ತಿರುವ ಅಪಾಯದ ಕರೆಗಂಟೆ ಮಾತ್ರ ಅಷ್ಟು ಮೋಹಕವಲ್ಲ.

ಆಹಾ! ಎಂಥ ಚಂದದ ಸೃಷ್ಟಿಚಿತ್ರ...
ಜಲವಾಸಿ ಜೀವವೈವಿಧ್ಯಕ್ಕೆ ಹೆಸರಾಗಿದ್ದ 'ದಿ ಗ್ರೇಟ್ ಬ್ಯಾರಿಯರ್ ರೀಫ್' ಅವಸಾನದ ದಾರಿಯಲ್ಲಿದೆ. ಬೆರಗಿನ ದ್ವೀಪವೀಗ ನಾಳಿನ ಸೂತಕದ ಮುನ್ಸೂಚನೆಯಾಗಿ ಕಾಣಿಸುತ್ತಿದೆ

